## ಅಧ್ಯಾಯ-೫

# ಕೈಗಾರಿಕೆಗಳು ಮತ್ತು ಆರ್ಥಿಕ ಪ್ರವೃತ್ತಿಗಳು

ಕೈಗಾರಿಕಾ ಬೆಳವಣಿಗೆಗೆ ಪೂರಕವಾದ ಉತ್ತಮ ವಾಯುಗುಣ, ಜಲ-ಖನಿಜ-ಅರಣ್ಯ ಸಂಪನ್ಮೂಲ, ಸಾರಿಗೆ ಸಂಪರ್ಕ, ಬ್ಯಾಂಕಿಂಗ್-ಹಣಕಾಸು ಮತ್ತಿತರ ಸೌಲಭ್ಯಗಳನ್ನು ಈ ತಾಲೂಕು ಹೊಂದಿದ್ದು, ಬೃಹತ್ ಹಾಗೂ ಮಧ್ಯಮ, ಸಣ್ಣ, ಅತಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಇಲ್ಲಿ ಅನುಕೂಲವಿದೆ. ಈ ತಾಲೂಕು ೧೯೯೦-೨೦೦೧ರ ಅವಧಿಯಲ್ಲಿ ಹಿಂದುಳಿದ ಕೈಗಾರಿಕಾ ಪ್ರದೇಶದ (ತೃತೀಯ ವಲಯ) ಗುಂಪಿಗೆ ಸೇರಿದ್ದು, ಈ ಅವಧಿಯಲ್ಲಿ ಸರ್ಕಾರದ ಕೈಗಾರಿಕಾ ಪ್ರೋತ್ಸಾಹ ನೀತಿಯಿಂದಾಗಿ ಅಭಿವೃದ್ಧಿ ಸಾಧಿಸುತ್ತಿರುವ ತಾಲೂಕಾಗಿತ್ತು. ೨೦೦೧-೦೬ರ ನೂತನ ಕೈಗಾರಿಕಾ ನೀತಿಯನ್ವಯ ಅಭಿವೃದ್ಧಿ ಹೊಂದುತ್ತಿರುವ ಕೈಗಾರಿಕಾ ಪ್ರದೇಶ 'ಬಿ' ವಲಯಕ್ಕೆ ಇದು ಸೇರಿತ್ತು. ಆದರೆ ೨೦೦೬-೧೧ರ ಕೈಗಾರಿಕಾ ನೀತಿಯಂತೆ ಪಿರಿಯಾಪಟ್ಟಣ ತಾಲೂಕು ಕೈಗಾರಿಕೆಗಳಲ್ಲಿ ಹಿಂದುಳಿದ ವಲಯ-II ಕ್ಕೆ ಸೇರಿಸಲ್ಪಟ್ಟಿದೆ.

ತಾಲೂಕಿನಲ್ಲಿ ಸ್ಥಾಪನೆಗೊಳ್ಳುವ ಕೈಗಾರಿಕೆಗಳು ೨೦೦೬-೧೧ರ ಅವಧಿಯಲ್ಲಿ ಕೆಳಕಂಡ ಸೌಲಭ್ಯಗಳಿಗೆ ಅರ್ಹವಾಗಿರುತ್ತವೆ. ವಲಯ-II ರಲ್ಲಿ ಸ್ಥಾಪನೆಯಾಗುವ ಸಣ್ಣ ಕೈಗಾರಿಕೆಗಳಿಗೆ ಸ್ಥಿರಾಸ್ತಿ ಮೌಲ್ಯದ ಶೇ. ೨೦ರಷ್ಟು ಅಥವಾ ಗರಿಷ್ಟ ಮಿತಿ ರೂ. ೧೦ ಲಕ್ಷ ಬಂಡವಾಳ ಹೂಡಿಕೆ ಸಹಾಯಧನ ಸಿಗಲಿದೆ. ಅಲ್ಲದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲರು, ಅಲ್ಪಸಂಖ್ಯಾತರು ಹಾಗೂ ಮಾಜಿ ಯೋಧ ವರ್ಗಕ್ಕೆ ಸೇರಿದ ಉದ್ಯಮಶೀಲರಿಗೆ ಸ್ಥಿರಾಸ್ಥಿ ಮೌಲ್ಯದ ಶೇ. ೫ರಷ್ಟು ಅಥವಾ ಗರಿಷ್ಟ ಮಿತಿ ಪ್ರತಿ ಘಟಕಕ್ಕೆ ಒಂದು ಲಕ್ಷ ರೂ.ಗಳ ಹೆಚ್ಚುವರಿ ಸಹಾಯಧನ ಸಿಗುತ್ತದೆ. ಮಹಿಳಾ ಉದ್ಯಮಶೀಲರಿಗೆ ಗರಿಷ್ಟ ಮಿತಿ ಪ್ರತಿಘಟಕಕ್ಕೆ ರೂ. ೫ ಲಕ್ಷ ಹೆಚ್ಚುವರಿ ಸಹಾಯಧನ ನೀಡಲಾಗುವುದು. ಈ ಉತ್ತೇಜನವು ಕೆ.ಎಸ್.ಎಫ್.ಸಿ., ಕೆ.ಎಸ್.ಐ.ಐ.ಡಿ.ಸಿ ಬ್ಯಾಂಕುಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳು ನೆರವು ನೀಡಿದ ಘಟಕಗಳಿಗೆ ಮಾತ್ರ ಲಭ್ಯವಿದೆ. ಹಣಕಾಸು ಸಂಸ್ಥೆಗಳು, ಬ್ಯಾಂಕುಗಳಿಂದ ಅವಧಿ ಸಾಲವನ್ನು ಪಡೆಯುವ ಸಂದರ್ಭದಲ್ಲಿ ಸಲ್ಲಿಸಲಾಗುವ ಲೋನ್ ಮತ್ತು ಕ್ರೆಡಿಟ್ ಡೀಡ್‌ಗಳಿಗೆ ಹಾಗೂ ಕೈಗಾರಿಕಾ ಭೂಮಿ, ನಿವೇಶನದ ವಿತರಣೆ ಸಂದರ್ಭದಲ್ಲಿ ಕೆ.ಐ.ಎ.ಡಿ.ಬಿ,

ಕೆ.ಎಸ್.ಎಸ್.ಡಿ.ಸಿ.ಗೆ ಸಲ್ಲಿಸಲಾಗುವ ಲೀಸ್, ಲೀಸ್–ಕಂ–ಸೇಲ್ ಮತ್ತು ಶುದ್ಧಕ್ರಯ ಪತ್ರದ ಸಂದರ್ಭದಲ್ಲಿ ಶೇ.೭೫ರಷ್ಟು ಸ್ಟಾಂಪ್ ಡ್ಯೂಟಿಯಲ್ಲಿ ವಿನಾಯಿತಿ ನೀಡಲಾಗುವುದು. ಜೊತೆಗೆ ಒಂದು ಸಾವಿರಕ್ಕೆ ಒಂದು ರೂಪಾಯಿಯಂತೆ ನೋಂದಣಿ ಶುಲ್ಕದಲ್ಲಿ ಕಡಿತ ಮಾಡಲಾಗುವುದು.

ಈ ತಾಲೂಕಿನಲ್ಲಿ ಸ್ಥಾಪನೆಗೊಳ್ಳುವ (ವಲಯ–II ರಲ್ಲಿ) ಮೆಗಾ, ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಿಗೆ ಶೇ.೭೫ರಷ್ಟು ಪರಿವರ್ತನಾ ಶುಲ್ಕ (ಕೈಗಾರಿಕಾ ಬಳಕೆಗಾಗಿ ಪರಿವರ್ತನೆಯಾಗುವ ಭೂಮಿ ಮೇಲೆ) ವಿನಾಯಿತಿ ನೀಡಲಾಗುವುದು. ಈ ಕೈಗಾರಿಕೆಗಳಿಗೆ ಕ್ರಮವಾಗಿ ಗರಿಷ್ಟ ಮಿತಿ ಪ್ರತಿ ಘಟಕಕ್ಕೆ ೨೫ ಎಕರೆ ಹಾಗೂ ೧೦ ಎಕರೆಗಳಾಗಿರುತ್ತದೆ. ಕೆ.ಐ.ಎ.ಡಿ.ಬಿ. ಮೂಲಕ ಭೂಮಿಯ ಸ್ವಾಧೀನ ಮತ್ತು ವಿತರಣೆ ಸಂದರ್ಭದಲ್ಲಿ ಶೇ.೧೦ರಷ್ಟು ಸ್ವಾಧೀನ ಶುಲ್ಕ ವಿಧಿಸಲಾಗುವುದು. ತ್ಯಾಜ್ಯ ವಸ್ತುಗಳ ಸಂಸ್ಕರಣಾ ಸ್ಥಾವರಗಳ ಸ್ಥಾಪನೆಗೆ ಎಲ್ಲಾ ವಲಯಗಳಲ್ಲಿ ಎಲ್ಲಾ ವರ್ಗದ ಕೈಗಾರಿಕೆಗಳಿಗೆ ಇ.ಟಿ.ಪಿ.ಯ ವೆಚ್ಚದ ಶೇ.೫೦ರಷ್ಟನ್ನು ಒನ್‌ಟೈಮ್ ಕ್ಯಾಪಿಟಲ್ ಸಹಾಯಧನವನ್ನಾಗಿ ನೀಡಲಾಗುವುದು. ಪ್ರತಿ ಘಟಕಕ್ಕೆ ಗರಿಷ್ಟ ಮಿತಿ ರೂ.೧೦೦ ಲಕ್ಷ ಗಳಾಗಿರುತ್ತದೆ. ವಲಯ–II ರಲ್ಲಿ ಬರುವ ಕೈಗಾರಿಕೆಗಳು ಯೋಜನೆಯ ಅನುಷ್ಠಾನ ಆರಂಭವಾದ ದಿನಾಂಕದಿಂದ ಪ್ರಾರಂಭಿಕ ಮೂರು ವರ್ಷಗಳ ಅವಧಿಗೆ ಪ್ಲಾಂಟ್ ಮತ್ತು ಮೆಷಿನರಿ ಹಾಗೂ ಕ್ಯಾಪಿಟಲ್ ಗೂಡ್ಸ್‌ಗೆ ಪ್ರವೇಶ ತೆರಿಗೆ ಮತ್ತು ವಿಶೇಷ ಪ್ರವೇಶ ತೆರಿಗೆಯಲ್ಲಿ ವಿನಾಯಿತಿಯಿರುತ್ತದೆ. ಜೊತೆಗೆ ಕಚ್ಚಾ ಪದಾರ್ಥಗಳಿಗೆ, ಇನ್‌ಪುಟ್‌ಗಳಿಗೆ ಕಾಂಪೋನೆಂಟ್ ಭಾಗಗಳು ಮತ್ತು ಬಳಕೆಯಾಗುವ ವಸ್ತುಗಳಿಗೆ (ಪೆಟ್ರೋಲಿಯಂ ಉತ್ಪನ್ನಗಳನ್ನು ಹೊರತುಪಡಿಸಿ) ಎಲ್ಲಿ ಅನ್ವಯವಾಗುತ್ತದೋ ಅಲ್ಲಿ ವಾಣಿಜ್ಯ ಉತ್ಪಾದನೆ ಆರಂಭವಾದ ದಿನಾಂಕದಿಂದ ಐದು ವರ್ಷಗಳವರೆಗೆ ಈ ವಿನಾಯಿತಿ ಲಭ್ಯವಿರುತ್ತದೆ. ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ನಿರ್ದಿಷ್ಟ ಕ್ಷೇತ್ರದಲ್ಲಿ ತರಬೇತಿಗಾಗಿ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಐದು ಎಕರೆವರೆಗೆ ಸರ್ಕಾರಿ ಜಮೀನನ್ನು ಅನುದಾನವಾಗಿ ನೀಡಲು ಪರಿಗಣಿಸಬಹುದು. ಇದರ ಜೊತೆಗೆ ಯೋಜನಾ ವೆಚ್ಚದ ಶೇ.೫೦ರಷ್ಟನ್ನು ಪ್ರತೀ ಕೇಂದ್ರಕ್ಕೆ ಎರಡು ಕೋಟಿಗಳಿಗೆ ಸೀಮಿತಗೊಳಿಸಿ ಕ್ಯಾಪಿಟಲ್ ವಂತಿಗೆಯಾಗಿ ನೀಡಲಾಗುವುದು. ನಿರುದ್ಯೋಗಿ ವಿದ್ಯಾವಂತ ಯುವಜನರಿಗೆ ವೃತ್ತಿಪರ ತರಬೇತಿಯನ್ನು ವಿವಿಧ ವ್ಯಾಪ್ತಿಯಲ್ಲಿ ಕೈಗಾರಿಕೆ/ಸೇವಾ ಘಟಕಗಳ ಮೂಲಕ ನೀಡಲು ಸರ್ಕಾರವು ನೂತನ ಯೋಜನೆಯೊಂದನ್ನು ಜಾರಿಗೊಳಿಸಿದೆ. ಇದರ ಪ್ರಕಾರ ಪ್ರತೀ ವಿದ್ಯಾರ್ಥಿಗೆ ತಿಂಗಳಿಗೆ ರೂ.೭೫೦ ರಂತೆ ವಿದ್ಯಾರ್ಥಿ ವೇತನವನ್ನು ತರಬೇತಿ ಸಂಸ್ಥೆಗಳ ಸೂಕ್ತ ಹೊಂದಾಣಿಕೆಯೊಂದಿಗೆ ನೀಡಲಾಗುವುದು. ತಾಂತ್ರಿಕ ಉನ್ನತೀಕರಣಕ್ಕಾಗಿ ವಲಯ–II ರಲ್ಲಿ ಸ್ಥಾಪನೆಗೊಳ್ಳುವ ಸಣ್ಣ ಕೈಗಾರಿಕೆಗಳು ಕೆ.ಎಸ್.ಎಫ್.ಸಿ./ಕೆ.ಎಸ್.ಐ.ಐ.ಡಿ.ಸಿ ಇಂದ ತಾಂತ್ರಿಕ ಉನ್ನತೀಕರಣ ಸಾಲವನ್ನು ಪಡೆದಾಗ ಲಭ್ಯವಿರುವ ಶೇ.೪ರ ಬಡ್ಡಿ ಸಹಾಯಧನ ಯೋಜನೆಯನ್ನು ಭಾರತ ಸರ್ಕಾರದ ಸಿ.ಎಲ್.ಸಿ.ಎಸ್. ಯೋಜನೆಯಲ್ಲಿ ಅರ್ಹವಾಗದ ಸಂದರ್ಭದಲ್ಲಿ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕುಗಳು ನೀಡುವ

ತಾಂತ್ರಿಕ ಉನ್ನತೀಕರಣ ಸಾಲಗಳಿಗೂ ವಿಸ್ತರಿಸಲಾಗುವುದು. ಪೇಟೆಂಟ್ ನೋಂದಣಿಯ ವೆಚ್ಚದ ಶೇ.೫೦ರಷ್ಟು ಸಹಾಯಧನ ಅಥವಾ ಪ್ರತಿ ಘಟಕಕ್ಕೆ ರೂ. ಎರಡು ಲಕ್ಷ ಉತ್ತೇಜನ ನೀಡಲಾಗುವುದು. ಕೃಷಿ ಉತ್ಪನ್ನಗಳನ್ನು ಸಂಸ್ಕರಿಸುವ ಕೈಗಾರಿಕೆಗಳು ಕೃಷಿ ಉತ್ಪನ್ನಗಳನ್ನು ರೈತರಿಂದ ನೇರವಾಗಿ ಖರೀದಿಸುವ ಸಂದರ್ಭದಲ್ಲಿ ಎ.ಪಿ.ಎಂ.ಸಿ. ಸೆಸ್‌ನಿಂದ ವಿನಾಯಿತಿ ನೀಡಲಾಗುತ್ತದೆ.

**ಪ್ರಾಚೀನ ಕೈಗಾರಿಕೆಗಳು :** ತಾಲೂಕಿನಲ್ಲಿ ಲಭ್ಯವಿರುವ ಶಾಸನಗಳ ಹಿನ್ನೆಲೆಯಲ್ಲಿ ಪ್ರಾಚೀನ ಕೈಗಾರಿಕೆಗಳ ಬಗ್ಗೆ ಹಲವು ವಿಷಯಗಳು ತಿಳಿದುಬರುತ್ತವೆ. ಪ್ರಾಚೀನ ಕಾಲದ ಕೈಗಾರಿಕೆಗಳ ಸಾಮಾನ್ಯ ಲಕ್ಷಣವೆಂದರೆ, ಅವು ಕುಲಕಸುಬುಗಳಾಗಿದ್ದವು. ಸಾಮಾನ್ಯವಾಗಿ ಉತ್ಪಾದನಾ ಕೇಂದ್ರಗಳು ಅವರ ಗೃಹ ಅಥವಾ ಕುಟೀರಗಳೇ ಆಗಿರುತ್ತಿತ್ತು. ಕೈಗಾರಿಕೆಗೆ ಬೇಕಾದ ಕಚ್ಚಾ ವಸ್ತುಗಳು ಅನತಿ ದೂರದಲ್ಲಿ ದೊರೆಯುತ್ತಿದ್ದವು. ತಯಾರಿಸಿದ ಪದಾರ್ಥಗಳನ್ನು ಪಟ್ಟಣದಲ್ಲೋ ಸಂತೆಗಳಲ್ಲೋ ಮಾರಾಟ ಮಾಡಲಾಗುತ್ತಿತ್ತು. ನೇಯ್ಗೆ, ಶಿಲ್ಪ ಮುಂತಾದ ಕೆಲವು ಕಸುಬುಗಳಲ್ಲಿ ಅತ್ಯುತ್ತಮ ಕೌಶಲ್ಯವನ್ನು ಕಾಣಬಹುದು.

ಸಾಮಾನ್ಯವಾಗಿ ಪ್ರತಿಯೊಂದು ವೃತ್ತಿಯವರೂ ತಮ್ಮದೇ ಆದ ಶ್ರೇಣಿಯನ್ನು ಹೊಂದಿದ್ದು, ಅವುಗಳ ಅಧಿಕಾರ ವ್ಯಾಪ್ತಿಯಲ್ಲಿ ತಮ್ಮ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ದೊಡ್ಡ ದೊಡ್ಡ ಊರುಗಳಲ್ಲಿ ಈ ಶ್ರೇಣಿಗಳು ಹೆಚ್ಚಿನ ಅಧಿಕಾರ ಹಾಗೂ ಪ್ರಭಾವವನ್ನು ಹೊಂದಿರುತ್ತಿದ್ದವು. ನೇಯ್ಗೆಯವರ, ಚಮ್ಮಾರರ, ಗಾಣಿಗರ, ಲೋಹಕಾರರ, ಕಲ್ಲುಕುಟಿಗರ – ಹೀಗೆ ಹಲವಾರು ಕಸಬಿನ ಶ್ರೇಣಿಗಳಿದ್ದುವು. ನೇಯ್ಗೆ ಬಟ್ಟೆಗಳ ಮೇಲೆ ಕಸೂತಿ ಮಾಡುವ, ಎಣ್ಣೆ ತೆಗೆಯುವ, ಮಣ್ಣಿನ ಮಡಕೆ–ಕುಡಿಕೆ, ಪಾತ್ರೆ, ಗೊಂಬೆ ಮಾಡುವ, ಮರಗಳಿಂದ ಪೀಠೋಪಕರಣಗಳು, ಗಾಡಿ, ಗೃಹನಿರ್ಮಾಣ, ವಿವಿಧ ಲೋಹಗಳ ಆಭರಣ, ದೇವತಾ ಮೂರ್ತಿಗಳನ್ನು ಎರಕ ಹುಯ್ಯುವ, ಕಬ್ಬಿಣ ಉಕ್ಕುಗಳಿಂದ ಕತ್ತಿ, ಭಲ್ಲೆ, ಗುರಾಣಿ, ಬಾಣ, ಚಾಕು ಮುಂತಾದವುಗಳನ್ನು ತಯಾರಿಸುವ ಕುಶಲಕರ್ಮಿಗಳಿದ್ದರು.

ತಾಲೂಕಿನ ಸೀಗೂರಿನಲ್ಲಿ ಕರ್ನಾಟಕ ರಾಜ್ಯ ಸಣ್ಣ ಪ್ರಮಾಣದ ಕೈಗಾರಿಕಾ ಅಭಿವೃದ್ಧಿ ನಿಗಮವು ೧೯೭೭ರಲ್ಲಿ ೧೭.೩೫ ಎಕರೆ ಪ್ರದೇಶದಲ್ಲಿ ೧೦ ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಿದೆ. ಈ ಶೆಡ್ಡುಗಳು ದಿ. ೨೫–೦೮–೨೦೦೭ರವರೆಗೂ ಕೈಗಾರಿಕೋದ್ಯಮಿಗಳಿಗೆ ಹಂಚಿಕೆಯಾಗಿರುವುದಿಲ್ಲ.

**ವಿದ್ಯುತ್ :** ತಾಲೂಕಿನ ಎಲ್ಲಾ ೧೯೭ ಜನವಸತಿ ಗ್ರಾಮಗಳು ಹಾಗೂ ೧೪೭ ಉಪಗ್ರಾಮಗಳು ೨೦೦೫ರ ಮಾರ್ಚ್ ಅಂತ್ಯಕ್ಕೆ ವಿದ್ಯುಚ್ಛಕ್ತಿ ಪಡೆದಿದ್ದವು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ವಿದ್ಯುಚ್ಛಕ್ತಿ ಬಳಕೆದಾರರ ವಿವರಗಳನ್ನು ಸಂಖ್ಯೆಯಲ್ಲಿ ನೀಡಿದೆ. ४೯,೮೬೯ ಗೃಹಬಳಕೆ, ೫೭೦ ಕೈಗಾರಿಕೆ ಬಳಕೆ, ೩,೦೫೬ ವಾಣಿಜ್ಯ ಬಳಕೆ, ೫,೯೮ ನೀರಾವರಿ ಪಂಪ್‌ಸೆಟ್‌ಗಳು, ೩೬೧ ಬೀದಿದೀಪಗಳು ವಿದ್ಯುತ್

ಸಂಪರ್ಕ ಪಡೆದಿದ್ದವು. ವಿದ್ಯುಚ್ಛಕ್ತಿ ಬಳಕೆ (ಲಕ್ಷ ಯೂನಿಟ್‌ಗಳಲ್ಲಿ) ೧೧೧೮.೫೩ ಗೃಹಬಳಕೆ, ೭೬.೩೪ ಕೈಗಾರಿಕೆ ಬಳಕೆ, ೨೦.೮೬ ವಾಣಿಜ್ಯ ಬಳಕೆ, ೩೦೦.೬೫ ನೀರಾವರಿ ಪಂಪ್‌ಸೆಟ್‌ಗಳು, ೧೭.೨೮ ಬೀದಿ ದೀಪಗಳಿಗೆ, ೧೦೧.೪೫ ಇತರೆ, ವಿದ್ಯುಚ್ಛಕ್ತಿ ಬಳಕೆಯಿಂದ ೨೦೦೮-೦೯ರಲ್ಲಿ ಬಂದ ಆದಾಯ ೧೩೯೦.೮೭ ಲಕ್ಷ ರೂ.ಗಳಾಗಿತ್ತು.

**ಖನಿಜ ಸಂಪತ್ತು :** ಖನಿಜಗಳ ಲಭ್ಯತೆ ಆರ್ಥಿಕಾಭಿವೃದ್ಧಿಯ ದಿಕ್ಕನ್ನು ನಿರ್ಧರಿಸುತ್ತವೆ. ಏಕೆಂದರೆ ಖನಿಜಗಳು ಔದ್ಯಮಿಕ ಮತ್ತು ಆರ್ಥಿಕ ಪ್ರಗತಿಯ ಆಧಾರ ಸ್ಥಂಭಗಳು. ಖನಿಜಗಳು ಕೈಗಾರಿಕೆಗಳಿಗೆ ಅವಶ್ಯವಾದ ಕಚ್ಚಾ ಸಂಪನ್ಮೂಲಗಳನ್ನು ಪೂರೈಸುತ್ತವೆ. ಖನಿಜಗಳಲ್ಲಿ ಸಮೃದ್ಧವಾಗಿರುವ ಯಾವುದೇ ಪ್ರದೇಶ, ದೇಶ, ತೀವ್ರ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿದೆ. ಆದರೆ ತಾಲೂಕಿನಲ್ಲಿ ೨೦೦೪-೦೫ರಲ್ಲಿ ೨೧,೪೦೦ ಟನ್ ಕಟ್ಟಡ ಕಲ್ಲು ಉತ್ಪಾದಿಸಿ, ೨೧,೪೦,೦೦೦ ಆದಾಯ ಪಡೆಯಲಾಗಿತ್ತು. ಇದರಿಂದ ಸರ್ಕಾರಕ್ಕೆ ೪೨೩೧೦೫ ರೂ.ಗಳ ರಾಜಧನ ಬಂದಿತ್ತು. ಇದು ೨೦೦೫-೦೬ರಲ್ಲಿ ೧೯,೭೦,೦೦೦ ರೂ. ಮೌಲ್ಯದ ೧೯೭೦೦ ಟನ್ ಉತ್ಪಾದನೆಯಾಗಿದ್ದು, ೧,೨೭,೭೮೪ ರೂ.ಗಳ ರಾಜಧನ ಬಂದಿತ್ತು. ಹಾಗೆಯೇ ಕಪ್ಪು ಗ್ರಾನೈಟ್ ಸಹ ತಾಲೂಕಿನಲ್ಲಿ ಉತ್ಪಾದಿಸಲಾಗುತ್ತಿದ್ದು, ೨೦೦೪-೦೫ರಲ್ಲಿ ೪,೦೦,೦೦೦ ರೂ.ಗಳ ೫೦೦ ಟನ್ ಕಟ್ಟಡ ಕಲ್ಲು ಉತ್ಪಾದಿಸಲಾಗಿತ್ತು. ೩೮,೧೫೪ ರೂ.ಗಳು ಸರ್ಕಾರಕ್ಕೆ ರಾಜಧನವಾಗಿ ಸಂದಾಯವಾಗಿತ್ತು. ಇದು ೨೦೦೫-೦೬ರಲ್ಲಿ ೩,೦೦,೦೦೦ ರೂ. ಮೌಲ್ಯದ ೪೦೦ ಟನ್ ಉತ್ಪಾದಿಸಲಾಗಿದ್ದು, ಇದರಿಂದ ಸರ್ಕಾರಕ್ಕೆ ೫,೧೭,೧೪೫ ರೂ.ಗಳ ರಾಜಧನ ಬಂದಿತ್ತು. ಆನಂತರದಲ್ಲೂ ಖನಿಜ ಸಂಪತ್ತಿನ ಉತ್ಪಾದನಾ ಕಾರ್ಯ ತಾಲೂಕಿನಲ್ಲಿ ಮುಂದುವರಿದಿತ್ತು.

**ಆಧುನಿಕ ಕೈಗಾರಿಕೆಗಳು :** ಪಿರಿಯಾಪಟ್ಟಣಕ್ಕೆ ಹೊಂದಿಕೊಂಡಂತಿರುವ ಸಾಯಿನಾಥ ಇಂಡಸ್ಟ್ರೀಸ್ ತಾಲ್ಲೂಕಿನ ಮೊದಲ ಕೈಗಾರಿಕೆ ಎನ್ನಬಹುದು. ಇದನ್ನು ೧೯೬೯ರಲ್ಲಿ ಎರಡು ಲಕ್ಷ ರೂ. ಬಂಡವಾಳದೊಂದಿಗೆ ಪ್ರಾರಂಭಿಸಲಾಯಿತು. ಇಲ್ಲಿ ಪ್ಲೈವುಡ್‌ಗೆ ಬೇಕಾದ ತೆಳುವಾದ ಶೀಟ್‌ಗಳನ್ನು ತಯಾರಿಸಲಾಗುತ್ತಿದೆ. ಪ್ರಸ್ತುತ ೫೦ಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ.

ಸೀಗೂರಿನಲ್ಲಿರುವ ಕುಮಾರ್‌ವೇಲ್ ಟೆಕ್ಸ್‌ಟೈಲ್ಸ್ ಉದ್ಯಮವನ್ನು ೧೯೭೮ರಲ್ಲಿ ಸುಂದರಂ ಅವರು ಸ್ಥಾಪಿಸಿದರು. ೯ ಲಕ್ಷ ರೂ. ಬಂಡವಾಳದಿಂದ ಪ್ರಾರಂಭಗೊಂಡಿತು. ಕಾರ್ಡೆಡ್ ಹಾಗೂ ಕಂಬ್ ಹತ್ತಿದಾರವನ್ನು ಹತ್ತಿಯಿಂದ ತೆಗೆಯಲಾಗುತ್ತದೆ. ಕಚ್ಚಾ ಹತ್ತಿಯನ್ನು ಗುಜರಾತ್, ಮಧ್ಯಪ್ರದೇಶ, ಚಿತ್ರದುರ್ಗ, ಬಿಜಾಪುರದಿಂದ ತರಿಸಲಾಗುವುದು. ಇಚಲ್‌ಕರಂಜಿ, ಅಸ್ಲಾಲಿ (ಗುಜರಾತ್) ಮಾಳೆಗಾಂ, ತಿರುಪುರ್, ಬೆಂಗಳೂರು ಮುಂತಾದೆಡೆಗೆ ರೀಲ್‌ದಾರವನ್ನು ರಫ್ತು ಮಾಡಲಾಗುತ್ತದೆ. ಇಲ್ಲಿ ೧೭೪ ಕಾರ್ಮಿಕರಿದ್ದಾರೆ.

ಕಂಪಲಾಪುರದಲ್ಲಿ ೧೯೮೨-೮೩ರಲ್ಲಿ ಸ್ಥಾಪಿಸಲಾದ ಶ್ರೀ ವಿಷ್ಣು ಟೆಕ್ಸ್‌ಟೈಲ್ಸ್ ಪ್ರೈ.ಲಿ. ಗಿರಣಿಯಲ್ಲಿ ಹತ್ತಿಯಿಂದ ದಾರವನ್ನು ತೆಗೆಯಲಾಗುತ್ತದೆ. ಬೇಕಾದ ಕಚ್ಚಾಹತ್ತಿಯನ್ನು ಉತ್ತರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರದಿಂದ ಆಮದು ಮಾಡಿಕೊಳ್ಳಲಾಗುತ್ತದೆ. ತಯಾರಾದ ದಾರವನ್ನು ಮಹಾರಾಷ್ಟ್ರ ಹಾಗೂ ಈರೋಡ್‌ಗೆ ಮಾರಾಟ ಮಾಡಲಾಗುತ್ತದೆ. ಈ ಉದ್ಯಮದಲ್ಲಿ ೧೮೫ ಲಕ್ಷ ರೂ.ಗಳ ಬಂಡವಾಳ ತೊಡಗಿಸಲಾಗಿದ್ದು, ೧೫೦ ಕಾರ್ಮಿಕರಿಗೆ ಉದ್ಯೋಗ ಒದಗಿಸಲಾಗಿದೆ.

೧೯೯೯ರಲ್ಲಿ ಹೈರೇಂಜ್ ಕಾಫಿಕ್ಯೂರಿಂಗ್ ವರ್ಕ್ಸನ್ನು ೭೫ ಲಕ್ಷ ಮೂಲ ಬಂಡವಾಳದಿಂದ ಪ್ರಾರಂಭಿಸಲಾಯಿತು. ಪಕ್ಕದ ಕೊಡಗು ಜಿಲ್ಲೆಯಿಂದ ಕಾಫಿ ಬೀಜವನ್ನು ತರಿಸಿಕೊಂಡು ಇಲ್ಲಿ ಸಂಸ್ಕರಿಸಿ ನೆಸ್‌ಲೆ, ಬಿರ್ಲಾ, ಐಟಿಸಿ, ಬ್ರೂಕ್‌ಬಾಂಡ್ ಕಂಪನಿಗಳಿಗಲ್ಲದೆ ವಿದೇಶಕ್ಕೂ ಕಳಿಸಲಾಗುತ್ತದೆ. ಇಲ್ಲಿ ೧೫೦ ಮಂದಿ ಕಾರ್ಮಿಕರಿದ್ದಾರೆ. ಮಂಚದೇವನಹಳ್ಳಿಯಲ್ಲಿ ಲಕ್ಷ್ಮಿ ಕಾಫಿ ಕ್ಯೂರಿಂಗ್ ವರ್ಕ್ಸ್ ೧೯೬೬ರಲ್ಲಿ ಕಾರ್ಯಾರಂಭ ಮಾಡಿತು. ಕಾಫಿ ಬೀಜವನ್ನು ಖರೀದಿಸಿ, ಹದಗೊಳಿಸಿ ಹೊರದೇಶಗಳಿಗೆ ರಫ್ತು ಮಾಡಲಾಗುತ್ತದೆ. ೬೫ ಕಾರ್ಮಿಕರು ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವಲ್ಲದೆ, ಪೊನ್ನಪ್ಪ ಕಾಫಿಕ್ಯೂರಿಂಗ್ ವರ್ಕ್ಸ್ ಕೊಪ್ಪ, ಕೆ.ಪಿ.ಸಿ.ಸಿ. ಕಾಫಿ ಕ್ಯೂರಿಂಗ್ ವರ್ಕ್ಸ್, ಕರ್ನಾಟಕ ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್, ಬೇಟಾ ಕಾಫಿ ಕ್ಯೂರಿಂಗ್ ವರ್ಕ್ಸ್, ಮಹಾಲಕ್ಷ್ಮಿ ಕಾಫಿ ಕ್ಯೂರಿಂಗ್ ವರ್ಕ್ಸ್, ಟಿಬೇಟಿಯನ್ ಕಾಫಿ ಕ್ಯೂರಿಂಗ್ ವರ್ಕ್ಸ್, ಅಗಸ್ತ್ಯ ಕಾಫಿ ಕ್ಯೂರಿಂಗ್ ವರ್ಕ್ಸ್ ಮುಂತಾದವು ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಬೈಲಕುಪ್ಪೆ ಒಂದನೆಯ ಕ್ಯಾಂಪ್‌ನ ಟಿಬೇಟಿಯನ್ ಕೈಗಾರಿಕೋದ್ಯಮ ಸಂಸ್ಥೆ ೧೯೬೪ರಲ್ಲಿ ಸ್ಥಾಪನೆಗೊಂಡಿತು. ಈ ಸಂಸ್ಥೆಯಲ್ಲಿ ಜಮಖಾನೆ, ಗಂಧದಕಡ್ಡಿ ಮತ್ತಿತರ ವಸ್ತುಗಳನ್ನು ತಯಾರಿಸಲಾಗುತ್ತಿದ್ದು, ಈ ಸಂಸ್ಥೆಯು ಟಿಬೇಟಿಯನ್ನರ ಜೀವನೋಪಾಯಕ್ಕಾಗಿ ಸಹಕಾರಿಯಾಗಿವೆ. ಅಲ್ಲದೇ ಇಲ್ಲಿ ಕಾಫಿ ಬೀಜಗಳನ್ನೂ ಸಂಸ್ಕರಿಸಲಾಗುತ್ತದೆ. ಟಿಬೇಟಿಯನ್ ಕೋ.ಆಪರೇಟಿವ್ ಸೊಸೈಟಿ ಇದರ ಮಾತೃ ಸಂಸ್ಥೆಯಾಗಿದೆ. ನ್ಯೂಜಿಲೆಂಡ್, ಆಸ್ಟ್ರೇಲಿಯಾ ಮುಂತಾದೆಡೆಗಳಿಂದ ಕಚ್ಚಾ ಉಣ್ಣೆಯನ್ನೂ, ರಾಜಸ್ಥಾನದಿಂದ ಹತ್ತಿಯನ್ನೂ ತರಿಸಿಕೊಂಡು ಉಣ್ಣೆ ಹಾಗೂ ಹತ್ತಿ ಜಮಖಾನೆಗಳನ್ನು ತಯಾರಿಸಿ ಟಿಬೇಟಿಯನ್ ಚಾರಿಟರಿ ಎಕ್ಸ್‌ಪೋರ್ಟ್ಸ್ ಹಾಗೂ ಲೆಮೂನ್ ಎಂಟರ್ ಪ್ರೈಸಸ್ ಮೂಲಕ ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಟಿಬೇಟಿಯನ್ ಅಗರಬತ್ತಿ ತಯಾರಿಕಾ ಸಂಸ್ಥೆ (೧೯೮೭) ಗಂಧದ ಕಡ್ಡಿಯನ್ನು ತಯಾರಿಸಿ ಹೊರದೇಶಗಳಿಗೆ ಕಳುಹಿಸುತ್ತಿದೆ. ಇದರ ಜೊತೆಗೆ ಅನೇಕ ಪಿಂಗಾಣಿ ವಸ್ತುಗಳನ್ನು ಹೊರದೇಶಗಳಿಂದ ತರಿಸಿಕೊಂಡು ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ.

ತಾಲೂಕಿನಲ್ಲಿ ಗುಡಿ ಕೈಗಾರಿಕೆಗಳನ್ನು ಸಾವಿರಾರು ಜನರು ಅರೆಕಾಲಿಕ ಹಾಗೂ ಪೂರ್ಣಕಾಲಿಕ ಕಸುಬಾಗಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಊಟದ ಎಲೆ, ಸೀಮೆಸುಣ್ಣ, ಉಣ್ಣೆಕಂಬಳಿ, ಈಚಲುಚಾಪೆ, ಮಂದಲಿಗೆ, ಹಪ್ಪಳ, ಮಸಾಲೆ ಪುಡಿ, ಜೇನು ಸಾಕಾಣಿಕೆ,

ಬೀಡಿಕಟ್ಟುವುದು, ಬೆತ್ತ–ಬಿದಿರಿನ ಕೈಗಾರಿಕೆ, ಹಗ್ಗ–ಹುರಿ ಹೊಸೆಯುವುದು, ಮಡಕೆ ಮಾಡುವುದು, ಅಗರಬತ್ತಿ, ವ್ಯವಸಾಯೋಪಕರಣ ತಯಾರಿಕೆ ಮುಂತಾದ ಕಿರು ಗೃಹಕೈಗಾರಿಕೆಗಳು ತಾಲೂಕಿನಲ್ಲಿವೆ. ಗುಡಿ ಕೈಗಾರಿಕೆಗಳಿಗೆ ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳು ಆರ್ಥಿಕ ನೆರವು ನೀಡುತ್ತಿವೆ.

೨೦೦೫ರ ಅಂಕಿ ಅಂಶಗಳ ಪ್ರಕಾರ ತಾಲೂಕಿನಲ್ಲಿ ಮೂರು ಬಟ್ಟೆ ಕಾರ್ಖಾನೆಗಳೂ, ಇತರೆ ಎಂಟು, ಒಟ್ಟು ೧೧ ಕಾರ್ಖಾನೆಗಳಿದ್ದು, ೧೧೭೦ ಜನ ಉದ್ಯೋಗಿಗಳಿದ್ದರು. ತಾಲೂಕಿನಲ್ಲಿ ಒಟ್ಟು ೧೨೪೬ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳಿದ್ದು, ೫,೨೯೧ ಕೆಲಸಗಾರರಿದ್ದರು. ಮಧ್ಯಮ ಪ್ರಮಾಣದ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳು ಒಂದೊಂದಿವೆ. ಅದೇ ೨೦೦೯ರ ಮಾರ್ಚ್ ಅಂತ್ಯಕ್ಕೆ ಎರಡು ಬಟ್ಟೆ ಗಿರಣಿ, ಎಂಟು ಇತರೆ ಕಾರ್ಖಾನೆಗಳಲ್ಲಿ ಒಟ್ಟು ೫೩೩ ಉದ್ಯೋಗಿಗಳಿದ್ದರು. ಇದೇ ರೀತಿ ತಾಲೂಕಿನಲ್ಲಿದ್ದ ೧,೩೧೧ ಸಣ್ಣ ಕೈಗಾರಿಕಾ ಘಟಕಗಳಲ್ಲಿ ೫,೪೩೦ ಮಂದಿ ಕೆಲಸಗಾರರಿದ್ದರು. ಅಲ್ಲದೆ ದೊಡ್ಡ ಪ್ರಮಾಣದ ಹಾಗೂ ಮಧ್ಯಮ ಪ್ರಮಾಣದ ತಲಾ ಒಂದೊಂದು ಕಾರ್ಖಾನೆಗಳಿದ್ದವು. ಸಣ್ಣ ಕೈಗಾರಿಕೆಗಳ ಬಗ್ಗೆ ಹೆಚ್ಚಿನ ವಿವರಗಳಿಗೆ ಕೋಷ್ಟಕ ೫.೧ ಅನ್ನು ನೋಡಿ.

**ಕೋಷ್ಟಕ: ೫.೧**

**೨೦೦೨–೨೦೦೩ ರಿಂದ ೨೦೦೮–೨೦೦೯ರವರೆಗೆ ಪಿರಿಯಾಪಟ್ಟಣ ತಾಲೂಕಿನಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಪ್ರಮಾಣದ ಕೈಗಾರಿಕೆಗಳ ವಿವರ**

**(ಸಂಖ್ಯೆಗಳಲ್ಲಿ)**

| ಕ್ರ.ಸಂ | ವಿವರ | | ೨೦೦೨–೦೩ | ೨೦೦೩–೦೪ | ೨೦೦೪–೦೫ | ೨೦೦೫–೦೬ | ೨೦೦೮–೦೯ |
|---|---|---|---|---|---|---|---|
| ೧ | ೨ | | ೩ | ೪ | ೫ | ೬ | ೭ |
| ೧ | ಆಟೋಮೊಬೈಲ್ | ಸಂಖ್ಯೆ | ೦ | ೦ | ೦ | – | ೦ |
| | | ಕೆಲಸಗಾರರು | ೦ | ೦ | ೦ | – | ೦ |
| ೨ | ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ | ಸಂಖ್ಯೆ | ೧೪ | ೧೪ | ೧೪ | ೨೫ | ೨೫ |
| | | ಕೆಲಸಗಾರರು | ೩೮ | ೩೮ | ೩೮ | ೬೦ | ೬೦ |
| ೩. | ಕೆಮಿಕಲ್ಸ್ | ಸಂಖ್ಯೆ | ೭೨ | ೭೨ | ೭೭ | ೭೭ | ೭೭ |
| | | ಕೆಲಸಗಾರರು | ೩೬೦ | ೩೬೦ | ೩೬೫ | ೩೬೫ | ೩೬೫ |
| ೪. | ಫೆರಸ್ ಮತ್ತು ನಾನ್ ಫೆರಸ್ | ಸಂಖ್ಯೆ | ೦ | ೦ | ೦ | – | ೦ |
| | | ಕೆಲಸಗಾರರು | ೦ | ೦ | ೦ | – | ೦ |
| ೫. | ಆಹಾರ ಮತ್ತು ಮಾದಕ ವಸ್ತುಗಳು | ಸಂಖ್ಯೆ | ೨೧೩ | ೨೧೩ | ೨೧೮ | ೨೨೨ | ೨೨೫ |
| | | ಕೆಲಸಗಾರರು | ೫೨೬ | ೫೨೬ | ೫೩೨ | ೫೪೪ | ೫೫೮ |

| ೧ | ೨ | | ೩ | ೪ | ೫ | ೬ | ೭ |
|---|---|---|---|---|---|---|---|
| ೬ | ಗ್ಲಾಸ್ ಮತ್ತು ಸಿರಾಮಿಕ್ಸ್ | ಸಂಖ್ಯೆ<br>ಕೆಲಸಗಾರರು | ೧೭<br>೬೮ | ೧೭<br>೬೮ | ೧೭<br>೬೮ | ೧೮<br>೭೮ | ೧೪<br>೭೮ |
| ೭ | ಜಾಬ್ ವರ್ಕ್ಸ್ ಮತ್ತು ರಿಪೇರಿ | ಸಂಖ್ಯೆ<br>ಕೆಲಸಗಾರರು | ೪೧<br>೮೨ | ೫೧<br>೯೨ | ೬೧<br>೧೦೭ | ೬೫<br>೧೧೫ | ೭೬<br>೧೪೮ |
| ೮ | ಚರ್ಮ | ಸಂಖ್ಯೆ<br>ಕೆಲಸಗಾರರು | ೩೬<br>೭೨ | ೩೬<br>೭೨ | ೩೬<br>೭೨ | ೩೬<br>೭೨ | ೩೬<br>೭೨ |
| ೯ | ಮೆಕ್ಯಾನಿಕಲ್ ಇಂಜಿನಿಯರಿಂಗ್ | ಸಂಖ್ಯೆ<br>ಕೆಲಸಗಾರರು | ೧೧೮<br>೪೫೪ | ೧೧೮<br>೪೫೪ | ೧೨೦<br>೪೫೮ | ೧೨೩<br>೪೬೭ | ೧೨೩<br>೪೬೭ |
| ೧೦ | ಕಾಗದ ಮತ್ತು ಮುದ್ರಣ | ಸಂಖ್ಯೆ<br>ಕೆಲಸಗಾರರು | ೦೯<br>೨೮ | ೦೯<br>೨೮ | ೦೯<br>೨೮ | ೦೯<br>೨೮ | ೦೯<br>೨೮ |
| ೧೧ | ರಬ್ಬರ್ ಮತ್ತು ಪ್ಲಾಸ್ಟಿಕ್ | ಸಂಖ್ಯೆ<br>ಕೆಲಸಗಾರರು | ೦೮<br>೧೯ | ೦೯<br>೨೮ | ೦೯<br>೨೮ | ೦೯<br>೨೮ | ೦೯<br>೨೮ |
| ೧೨ | ಟೆಕ್ಸ್‌ಟೈಲ್ಸ್ | ಸಂಖ್ಯೆ<br>ಕೆಲಸಗಾರರು | ೨೦೭<br>೪೬೪ | ೨೧೨<br>೪೭೪ | ೨೧೨<br>೪೭೪ | ೨೪೪<br>೪೬೭ | ೨೨೪<br>೫೦೦ |
| ೧೩. | ಮರ | ಸಂಖ್ಯೆ<br>ಕೆಲಸಗಾರರು | ೨೩೪<br>೫೬೮ | ೨೪೪<br>೫೮೮ | ೨೫೬<br>೬೦೦ | ೨೭೩<br>೫೦೦ | ೨೫೯<br>೬೮೧ |
| ೧೪. | ಇತರೆ | ಸಂಖ್ಯೆ<br>ಕೆಲಸಗಾರರು | ೨೭೧<br>೧೨೧೩ | ೧೩೧<br>೨೩೪೬ | ೧೫೨<br>೨೩೭೧ | ೧೬೫<br>೨೩೯೭ | ೧೯೪<br>೨೪೪೫ |
| ೧೫. | ಒಟ್ಟು | ಸಂಖ್ಯೆ<br>ಕೆಲಸಗಾರರು | ೧೨೪೦<br>೩೮೯೨ | ೧೨೮೬<br>೪೧೫೦ | ೧೧೮೧<br>೫೧೪೧ | ೧೨೪೬<br>೫೨೯೧ | ೧೩೧೧<br>೫೪೩೦ |

**ಕರಕುಶಲ ಕೈಗಾರಿಕೆ :** ತಾಲೂಕಿನಲ್ಲಿ ೫೦೦ ಮಂದಿ ಮರಗೆಲಸದಲ್ಲೂ, ೩೫೦ ಮಂದಿ ಕಮ್ಮಾರಿಕೆಯಲ್ಲೂ, ೨೦೦ ಮಂದಿ ಕುಂಬಾರಿಕೆಯಲ್ಲೂ, ೧೫೦ ಮಂದಿ ದೋಬಿಗಳಾಗಿಯೂ, ೧೦೦ ಮಂದಿ ಕ್ಷೌರಿಕರಾಗಿಯೂ, ೩೦೦ ಮಂದಿ ಬಿದಿರು ವೃತ್ತಿಯಲ್ಲೂ, ೧೮೦ ಮಂದಿ ಸುಣ್ಣ ಸುಡುವವರಾಗಿಯೂ, ೧೨೫ ಮಂದಿ ಚಮ್ಮಾರಿಕೆಯಲ್ಲೂ, ೨೦೦ ಮಂದಿ ಚಾಪೆ ತಯಾರಿಕೆಯಲ್ಲೂ, ೫೦ ಮಂದಿ ಉಣ್ಣೆ ನೇಯ್ಗೆಯಲ್ಲೂ, ೩೦೦ ಮಂದಿ ಟೈಲರಿಂಗ್ ವೃತ್ತಿಯಲ್ಲೂ, ೭೫ ಮಂದಿ ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕೆಯಲ್ಲೂ, ೪೦ ಮಂದಿ ತೆಂಗಿನ ನಾರು ಉದ್ಯಮದಲ್ಲೂ, ೩೦ ಮಂದಿ ಹತ್ತಿ ನೇಯ್ಗೆಯಲ್ಲೂ, ೨೫೦ ಮಂದಿ ಅಗರಬತ್ತಿ ತಯಾರಿಕೆಯಲ್ಲೂ, ೧೨೦ ಮಂದಿ ನಿಟ್ಟಿಂಗ್‌ನಲ್ಲೂ ಹಾಗೂ ೨೦೦ ಮಂದಿ ಜೇನು ಸಾಕಣಿಕೆಯಲ್ಲೂ ಹೀಗೆ ಒಟ್ಟು ೩೧೭೦ ಮಂದಿ ಕರಕುಶಲ ಕಾರ್ಮಿಕರು ವಿವಿಧ

ಕರಕುಶಲ ಕೈಗಾರಿಕೆಗಳಲ್ಲಿ ತೊಡಗಿದ್ದು, ತನ್ಮೂಲಕ ತಾಲೂಕಿನ ಅಭಿವೃದ್ಧಿಗೆ ಸಹಕಾರಿಯಾಗಿದ್ದರು.

**ರೇಷ್ಮೆ ಉದ್ಯಮ :** ರೇಷ್ಮೆಯು ಗೃಹ ಕೈಗಾರಿಕೆಗಳಲ್ಲಿ ಒಂದಾಗಿದ್ದು, ವ್ಯವಸಾಯಕ್ಕೆ ಪೂರಕವಾಗಿದೆ. ಗ್ರಾಮೀಣ ಪ್ರದೇಶದ ಕೃಷಿಕರಿಗೆ ಸಾಕಷ್ಟು ಉದ್ಯೋಗಾವಕಾಶ ಹಾಗೂ ಗ್ರಾಮೀಣ ಪ್ರದೇಶದ ಆರ್ಥಿಕಾಭಿವೃದ್ಧಿಗೂ ನೆರವಾಗಿದೆ. ತಾಲೂಕಿನಲ್ಲಿ ರೇಷ್ಮೆ ಕೃಷಿಗೆ ಉತ್ತಮ ಹವಾಗುಣವಿದ್ದು, ೧೯೮೪–೮೫ರಲ್ಲಿ ೧೩೬ ಹೆಕ್ಟೇರು ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯಲಾಗಿದ್ದರೆ, ೧೯೯೨–೯೩ರಲ್ಲಿ ೩೧೬ ಹೆಕ್ಟೆರ್ ಪ್ರದೇಶದಲ್ಲೂ, ೧೯೯೫–೯೬ರಲ್ಲಿ ೧೭೯ ಹೆಕ್ಟೇರ್ ಪ್ರದೇಶದಲ್ಲೂ, ೨೦೦೦–೦೧ರಲ್ಲಿ ೧೩೨ ಹೆಕ್ಟೇರ್ ಪ್ರದೇಶದಲ್ಲೂ ಹಾಗೂ ೨೦೦೫–೦೬ರಲ್ಲಿ ೧೦೨.೬೦ ಹೆಕ್ಟೇರ್ ಪ್ರದೇಶದಲ್ಲೂ ಹಿಪ್ಪುನೇರಳೆ ಬೆಳೆಯಲಾಗುತ್ತಿತ್ತು. ೨೦೦೫–೦೬ರಲ್ಲಿ ೫೪.೪೫ ಲಕ್ಷ ರೂ.ಗಳ ४೧.೮೮४ ಟನ್ ರೇಷ್ಮೆಗೂಡು ಉತ್ಪಾದಿಸಲಾಗಿತ್ತು. ೨೩೯ ಮಂದಿ ರೈತರು ಈ ಕೃಷಿಯಲ್ಲಿ ತೊಡಗಿದ್ದರು. ಅದೇ ೨೦೦೮–೦೯ರ ಸಾಲಿನಲ್ಲಿ ಒಟ್ಟು ೧೩೦–೨೦ ಹೆ. ಪ್ರದೇಶದಲ್ಲಿ ಹಿಪ್ಪುನೇರಳೆಯನ್ನು ಬೆಳೆಯಲಾಗಿದ್ದು, ೫೮,೫೯೨ ಟನ್ನು ರೇಷ್ಮೆಗೂಡನ್ನು ಹಾಗೂ ೮೨.೦೩ ಲಕ್ಷ ರೂ. ಮೌಲ್ಯದ ರೇಷ್ಮೆಯನ್ನೂ ಉತ್ಪಾದಿಸಲಾಗಿದ್ದು, ೨೪೩ ಮಂದಿ ಕೃಷಿಕರು ಇದರಲ್ಲಿ ತೊಡಗಿದ್ದರು.

**ಹೈನು ಉದ್ಯಮ :** ತಾಲೂಕಿನ ರೈತರ ಜೀವನಾಡಿಯಾಗಿರುವ ಹೈನುಗಾರಿಕೆಯು 'ಕ್ಷೀರಕ್ರಾಂತಿ'ಯ ಮೂಲಕ ಜನರ ಆರ್ಥಿಕ, ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿ, ಉತ್ತಮ ಜೀವನ ನಿರ್ವಹಣೆಗೆ ನಾಂದಿ ಹಾಡಿದೆ. ಪಿರಿಯಾಪಟ್ಟಣ ತಾಲೂಕಿನಲ್ಲಿ ಕಾರ್ಯನಿರತ ಹಾಲು ಉತ್ಪಾದಕರ ಸಂಘಗಳ ಸಂಖ್ಯೆ ೨೦೦४–೦೫ರಲ್ಲಿ ೫४ ಆಗಿತ್ತು. ಇವುಗಳ ಸಂಖ್ಯೆ ೨೦೦೬–೦೭ರಲ್ಲಿ ೫೫ ಆಗಿದೆ. ಈ ಸಂಘಗಳು ೩೦,೭೯,೧೬೭ ಕೆ.ಜಿ. ಹಾಲನ್ನು (೨೦೦೬–೦೭ರಲ್ಲಿ) ಉತ್ಪಾದಿಸುತ್ತಿದ್ದು, ೧४,೫೫,೮४೩ ಕೆ.ಜಿ. ಹಾಲನ್ನು ಮಾರಾಟ ಮಾಡಲಾಗಿತ್ತು. ಈ ಸಂಘಗಳಲ್ಲಿ ೧೬,೭೭೭ ಒಟ್ಟು ಸದಸ್ಯರಿದ್ದು, ಅವರಲ್ಲಿ ४,೯೦೫ ಮಂದಿ ಮಹಿಳೆಯರು ೨೧೦೩ ಮಂದಿ ಪರಿಶಿಷ್ಟ ಜಾತಿಗೂ, ೭೧४ ಮಂದಿ ಪರಿಶಿಷ್ಟ ಪಂಗಡಕ್ಕೂ, ೭,೬೬೩ ಮಂದಿ ಸಣ್ಣ ರೈತರೂ, ४೩೧೫ ಮಂದಿ ಅತಿಸಣ್ಣ ರೈತರೂ, ೨,೧೨೫ ಮಂದಿ ಭೂರಹಿತ ಕಾರ್ಮಿಕರೂ ಹಾಗೂ ೨೬೭४ ಮಂದಿ ಇತರರೂ ಸೇರಿದ್ದರು. ೨೦೦೮–೦೯ರ ಸಾಲಿನಲ್ಲಿ ತಾಲೂಕಿನಲ್ಲಿದ್ದ ೮೧ ಹಾಲು ಉತ್ಪಾದಕರ ಸಹಕಾರ ಸಂಘಗಳು ೧೮,೯೬೦ ಮಂದಿ ಸದಸ್ಯರನ್ನು ಹೊಂದಿದ್ದವು.

**ಉದ್ಯೋಗ :** ೨೦೦೧ರ ಜನಗಣತಿಯಂತೆ ಪಿರಿಯಾಪಟ್ಟಣ ತಾಲೂಕಿನಲ್ಲಿ ಒಟ್ಟು ೨,೨४,೨೫४ ಜನಸಂಖ್ಯೆಯಿದ್ದು, ೨,೦೯,೩೩೦ (ಶೇ.೯೩.೩४) ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲೂ, ೧४,೯೨४ ಶೇ. ೬.೬೬ ಜನಸಂಖ್ಯೆ ಪಟ್ಟಣಗಳಲ್ಲಿ ವಾಸಿಸುತ್ತಿದ್ದಾರೆ. ಪ್ರತಿ. ಚದರ ಕಿ.ಮೀ.ಗೆ ೨೭೫ ಜನಸಾಂದ್ರತೆಯಿದ್ದರೆ ೯೩೬ ಲಿಂಗಾನುಪಾತವಿದೆ.

(ಪ್ರತಿ ಸಾವಿರ ಗಂಡಸರಿಗೆ ೯೩೬ ಮಹಿಳೆಯರು) ಒಟ್ಟು ಜನಸಂಖ್ಯೆಯಲ್ಲಿ ೮೮೦೩೫ ಮಂದಿ ಮುಖ್ಯ ಕೆಲಸಗಾರರೂ, ೧೪,೦೨೨ ಮಂದಿ ಅರೆ ಕೆಲಸಗಾರರು ಹಾಗೂ ೧,೨೨,೧೯೭ ಮಂದಿ ಕೆಲಸಗಾರರಲ್ಲದವರಿದ್ದರು. ೬೪,೭೧೯ ಮಂದಿ ಕೃಷಿ ಸಾಗುವಳಿದಾರರು, ೧೮,೫೯೭ ಮಂದಿ ಕೃಷಿ ಕಾರ್ಮಿಕರಿದ್ದಾರೆ. ಪಿರಿಯ ಪಟ್ಟಣ ತಾಲೂಕು ಮೈಸೂರು ಜಿಲ್ಲೆ ಉದ್ಯೋಗ ವಿನಿಮಯ ಕಚೇರಿಯ ವ್ಯಾಪ್ತಿಗೆ ಸೇರಿದ್ದು, ೨೦೦೪-೦೫ರಲ್ಲಿ ೨೫೯೨ ಮಂದಿ ಹಾಗೂ ೨೦೦೫-೦೬ರಲ್ಲಿ ೧,೭೮೪ ಮಂದಿ ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರನ್ನು ಇಲ್ಲಿ ನೋಂದಾಯಿಸಿಕೊಂಡಿದ್ದಾರೆ. ಇದೇ ಅವಧಿಯಲ್ಲಿ ನಾಲ್ಕು ಹಾಗೂ ಮೂರು ಮಂದಿ ತಾಲೂಕಿನಿಂದ ಉದ್ಯೋಗ ಪಡೆದುಕೊಂಡಿದ್ದರು. ೨೦೦೪-೦೫ ಹಾಗೂ ೨೦೦೫-೦೬ರಲ್ಲಿ ಪಿರಿಯಾ ಪಟ್ಟಣ ತಾಲೂಕಿನ ವಿವಿಧ ವರ್ಗದ ಪದವೀಧರರು ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಉದ್ಯೋಗ ಬಯಸಿ ನೋಂದಾಯಿಸಿಕೊಂಡಿದ್ದ ವಿವರವನ್ನು ಮುಂದೆ ನೀಡಿದೆ.

| ಪದವೀಧರರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಹಿಂ.ವರ್ಗ–೧ | ಹಿಂ.ವರ್ಗ –೨ಎ | ಹಿಂ.ವರ್ಗ–೨ಬಿ | ಹಿಂ.ವರ್ಗ –೩ಎ | ಹಿಂ.ವರ್ಗ–೩ಬಿ | ಸಾಮಾನ್ಯ ವರ್ಗ | ಒಟ್ಟು |
|---|---|---|---|---|---|---|---|---|---|
| ೨೦೦೪–೦೫ | | | | | | | | | |
| ಬಿ.ಎ. | ೧೩ | ೦೪ | ೦೧ | ೦೨ | – | ೦೨ | ೦೧ | ೧೫ | ೩೮ |
| ಬಿ.ಎಸ್ಸಿ | ೦೧ | – | – | – | ೦೧ | ೦೨ | – | ೧೧ | ೧೫ |
| ಬಿ.ಕಾಂ | ೦೪ | ೦೧ | – | ೦೧ | – | ೦೧ | – | ೦೯ | ೧೪ |
| ಬಿ.ಬಿ.ಎಂ | – | – | – | – | – | – | – | ೦೩ | ೦೩ |
| ೨೦೦೫–೦೬ | | | | | | | | | |
| ಬಿ.ಎ. | ೧೪ | ೦೫ | ೦೧ | ೦೨ | – | ೦೨ | ೦೨ | ೧೦ | ೩೬ |
| ಬಿ.ಎಸ್ಸಿ | ೦೧ | – | – | – | ೦೧ | ೦೧ | ೦೧ | ೧೨ | ೧೬ |
| ಬಿ.ಕಾಂ | ೦೪ | ೦೧ | – | ೦೧ | – | ೦೧ | ೦೧ | ೦೯ | ೧೭ |
| ಬಿ.ಬಿ.ಎಂ | – | – | – | – | – | ೦೧ | – | ೦೨ | ೦೩ |

ಆಧಾರ : ಮೈಸೂರು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮೈಸೂರು.

**ಬಡತನ ನಿರ್ಮೂಲನೆ :** ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್‌ಗಳು ಗ್ರಾಮ ಪಂಚಾಯತಿಗಳ ಮೂಲಕ ಹಲವಾರು ಪ್ರಗತಿಪರ ಯೋಜನೆಗಳನ್ನು ಸಾರ್ವಜನಿಕ ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿವೆ.

ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಲ್ಲಿ ೨೦೦೫-೦೬ರಲ್ಲಿ ೧.೨೮೧ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ೮೪೫.೧೧ ಟನ್ ಆಹಾರ ಪದಾರ್ಥಗಳನ್ನು ಉಪಯೋಗಿಸಲಾಯಿತು. ಇದೇ ಸಾಲಿನಲ್ಲಿ ತಾಲೂಕಿನಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ ೪೪೪ ಮನೆಗಳನ್ನು ಕಟ್ಟಿ ಫಲಾನುಭವಿಗಳಿಗೆ ವಿತರಿಸಲಾಗಿತ್ತು. ೨೦೦೮-೦೯ರ ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆಯಡಿ ೨೨೬ ಮನೆಗಳನ್ನು ನಿರ್ಮಿಸಿ, ಫಲಾನುಭವಿಗಳಿಗೆ ನೀಡಲಾಗಿತ್ತು.

ಪಿರಿಯಾಪಟ್ಟಣ ತಾಲೂಕಿನಲ್ಲಿ ಒಂದನೇ ಹಂತದ ಸ್ವಚ್ಛ ಗ್ರಾಮ ಯೋಜನೆಯು ೨೦೦೦ ದಿಂದ ಜಾರಿಯಲ್ಲಿದ್ದು, ೨೦೦೬-೦೭ರ ಅವಧಿಯಲ್ಲಿ ಸತ್ಯಗಾಲ (ಪಂಚವಳ್ಳಿ ಗ್ರಾಮಪಂಚಾಯಿತಿ) ಜಿ.ಬಸವನಹಳ್ಳಿ (ಬೆಟ್ಟಹಳ್ಳಿ ಗ್ರಾ.ಪಂ) ವಡ್ಡರಹಳ್ಳಿ (ಅತ್ತಿಗೂಡು ಗ್ರಾ.ಪಂ) ಆವರ್ತಿ (ಕೊಪ್ಪ ಗ್ರಾ.ಪಂ) ಹಾಗೂ ಶ್ಯಾನುಭೋಗನಹಳ್ಳಿ (ದೊಡ್ಡ ಕಮ್ಮರಹಳ್ಳಿ ಗ್ರಾ. ಪಂ) ಗ್ರಾಮಗಳು ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದವು. ಈ ಗ್ರಾಮಗಳಲ್ಲಿ ರಸ್ತೆಕಾಮಗಾರಿ, ಶೌಚಾಲಯ ಮತ್ತು ಅಸ್ತ್ರ ಒಲೆ ನಿರ್ಮಾಣಕ್ಕೆ, ತಿಪ್ಪೆಗುಂಡಿ ಸ್ಥಳಾಂತರ ಹಾಗೂ ಶಾಲಾ ನೈರ್ಮಲ್ಯ ಮಾಡಲು ೭೬.೧೨ ಲಕ್ಷ ರೂ.ಗಳು ಬಿಡುಗಡೆಯಾಗಿದ್ದು, ಸೆಪ್ಟೆಂಬರ್ ೨೦೦೭ರ ಅಂತ್ಯಕ್ಕೆ ೭೦.೧೧ ಲಕ್ಷ ರೂ.ಗಳು ವೆಚ್ಚವಾಗಿತ್ತು. ಕುಗ್ರಾಮ-ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ (೨೦೦೫-೦೬ರಲ್ಲಿ) ಮೆಳ್ಳಹಳ್ಳಿ (ಹಿಟ್ನೆಹೆಬ್ಬಾಗಿಲು ಗ್ರಾಮ ಪಂಚಾಯಿತಿ) ಗ್ರಾಮ ಆಯ್ಕೆಯಾಗಿದ್ದು, ರೂ.೨೦ ಲಕ್ಷ ಅನುದಾನ ಬಿಡುಗಡೆಯಾಗಿತ್ತು. ರೂ. ೧೫.೪೦ ಲಕ್ಷ ವೆಚ್ಚವಾಗಿತ್ತು. ಈ ಯೋಜನೆಯಲ್ಲಿ ೧೨ ಕಾಮಗಾರಿಗಳ ಗುರಿ ಹೊಂದಲಾಗಿದ್ದು, ಏಳು ಕಾಮಗಾರಿಗಳು ಮುಕ್ತಾಯವಾಗಿವೆ. ಐದು ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದವು. ೨೦೦೮-೦೯ರ ಸಾಲಿನಲ್ಲಿ ಆಶ್ರಯ ಯೋಜನೆಗಳಲ್ಲಿ ನಿರ್ಮಿಸಲ್ಪಟ್ಟ ಮನೆಗಳು ೭೨೪. ಡಾ. ಅಂಬೇಡ್ಕರ್ ಯೋಜನೆಯಡಿಯಲ್ಲಿ ಕಟ್ಟಲ್ಪಟ್ಟ ಮನೆಗಳು ೩೮, ಇಂದಿರಾ ಅವಾಸ್ ಯೋಜನೆಯಡಿಯಲ್ಲಿ ಕಟ್ಟಿದ ಮನೆಗಳು ೨೨೬. ೨೦೦೮-೦೯ರಲ್ಲಿ ಸ್ವರ್ಣಜಯಂತಿ ಗ್ರಾಮಸಮೃದ್ಧಿ ಯೋಜನೆಯಲ್ಲಿ ಪ್ರಯೋಜನ ಪಡೆದವರ ಸಂಖ್ಯೆ ಹೀಗಿದೆ : ೦೪ ವೈಯಕ್ತಿಕ, ೩೦ ಗುಂಪುಗಳು ಪ್ರಯೋಜನ ಪಡೆದಿದ್ದವು.

**ತಾಲ್ಲೂಕಿನಲ್ಲಿ ಕೈಗಾರಿಕಾ ಅಭಿವೃದ್ಧಿಯ ಸಾಧ್ಯತೆಗಳು :** ತಾಲ್ಲೂಕಿನಲ್ಲಿ ಚಮ್ಮಾರ ಜನಾಂಗ ಅಧಿಕ ಪ್ರಮಾಣದಲ್ಲಿದ್ದು, ಅವರು ತಯಾರಿಸುವ ಚಪ್ಪಲಿಗಳು ಪ್ರಸಿದ್ಧಿ ಪಡೆದಿವೆ. ಇವರು ಸಾಂಪ್ರಾದಾಯಿಕ ವಿಧಾನದಿಂದ ಚಪ್ಪಲಿಗಳನ್ನು ತಯಾರಿಸುತ್ತಾರೆ. ಇವರಿಗೆ ಆಧುನಿಕ ಉಪಕರಣಗಳನ್ನು ಉಪಯೋಗಿಸುವುದಕ್ಕೆ ತರಬೇತಿ ನೀಡಿ ಉತ್ತಮ ಗುಣಮಟ್ಟದ ಚಪ್ಪಲಿ, ಚರ್ಮದ ಸೂಟ್‌ಕೇಸು, ಔಷಧಿ ಕಿಟ್ಟು, ಆಕರ್ಷಣೀಯ ಕೈಚೀಲ ಮೊದಲಾದವುಗಳನ್ನು ತಯಾರಿಸಲು ಪ್ರೋತ್ಸಾಹಿಸುವುದರ ಮೂಲಕ ಚರ್ಮೋದ್ಯಮವನ್ನು ಲಾಭದಾಯಕ ಉದ್ಯಮವಾಗಿ ಮಾಡಲು ಅವಕಾಶವಿದೆ.

ತಾಲೂಕಿನಲ್ಲಿ ೧೩ ದೊಡ್ಡ ಕೆರೆ, ೩೮೭ ಸಣ್ಣಪುಟ್ಟ ಕೆರೆಕಟ್ಟೆಗಳು, ಸುಮಾರು ೨೯೫೫ ಹೆಕ್ಟೇರ್‌ನಷ್ಟು ನಾಲಾ ಸೌಲಭ್ಯವಿದೆ. ಇವೆಲ್ಲವು ಒಟ್ಟಿಗೆ ಸೇರಿ ತಾಲೂಕಿನಲ್ಲಿ ೧೨,೭೪೮ ಹೆಕ್ಟೇರ್‌ನಷ್ಟು ಜಲವಿಸ್ತೀರ್ಣವು ಮೀನುಗಾರಿಕೆಗೆ ಲಭ್ಯವಿರುವುದರಿಂದ ಮೀನುಗಾರಿಕೆ ಅಭಿವೃದ್ಧಿಗೆ ವಿಪುಲ ಅವಕಾಶವಿದೆ.

ವ್ಯವಸಾಯೋಪಕರಣ, ಕಾಮಗಾರಿ ಉಪಕರಣ, ಸಮ್ಮಿಶ್ರ ರಸಗೊಬ್ಬರ, ಇಟ್ಟಿಗೆ ತಯಾರಿಕೆ, ಅಕ್ಕಿಗಿರಣಿ ಮುಂತಾದ ಕೈಗಾರಿಕೆಗಳಿಗೆ ತಾಲ್ಲೂಕಿನಲ್ಲಿ ಹೆಚ್ಚಿನ ಅವಕಾಶವಿದೆ. ತಾಲ್ಲೂಕಿನ ಗೃಹ ಕೈಗಾರಿಕಾ ಘಟಕಗಳು ಸಾಂಪ್ರದಾಯಿಕ ವಿಧಾನದಲ್ಲಿ ವ್ಯವಸಾಯೋಪಕರಣಗಳನ್ನು ಹಾಗೂ ಕಾಮಗಾರಿ ಉಪಕರಣಗಳನ್ನು ತಯಾರಿಸುತ್ತಿವೆ. ಇವುಗಳ ಜೊತೆಗೆ ಆಧುನಿಕ ಘಟಕಗಳನ್ನು ಸ್ಥಾಪಿಸಿ ಸುಧಾರಿಸಿದ ಉಪಕರಣಗಳಾದ ಕಬ್ಬಿಣದ ನೇಗಿಲು, ಕಳೆತೆಗೆಯುವ ಯಂತ್ರ, ಮುಸುಕಿನ ಜೋಳ, ರಾಗಿ, ಭತ್ತವನ್ನು ಬಡಿದು ವಿಂಗಡಿಸುವ ಯಂತ್ರ ಮೊದಲಾದವುಗಳನ್ನು ತಯಾರಿಸುವುದರಿಂದ ಇವುಗಳಿಗೆ ಉತ್ತಮ ಬೇಡಿಕೆಯುಂಟಾಗುತ್ತದೆ. ರಾಸಾಯನಿಕ ಗೊಬ್ಬರದ ಬೇಡಿಕೆಯನ್ನು ಪೂರೈಸಲು ತಾಲ್ಲೂಕಿನಲ್ಲಿ ಒಂದೆರಡು ಸಣ್ಣ ಪ್ರಮಾಣದ ರಾಸಾಯನಿಕ ಕಾರ್ಖಾನೆಗಳನ್ನು ಸ್ಥಾಪಿಸಲು ಅವಕಾಶವಿದೆ. ಬೇಡಿಕೆ ಆಧಾರಿತ ಉದ್ದಿಮೆಗಳಾದ ಅಗರಬತ್ತಿ ತಯಾರಿಕೆ, ಸಿದ್ಧಉಡುಪು ತಯಾರಿಕೆ, ರೇಷ್ಮೆ ಹುಳುಗಳ ಸಾಕಾಣಿಕೆ, ವಾಹನಗಳ ರಿಪೇರಿ, ನಯಗೊಳಿಸಿದ ಗ್ರಾನೈಟ್ ಟೈಲ್ಸ್, ಹಣ್ಣುಗಳ ಶೀತಲೀಕರಣ, ಸಣ್ಣಪ್ರಮಾಣದ ಹಿಟ್ಟಿನ ಗಿರಣಿ, ಪಶು ಮತ್ತು ಕೋಳಿ ಆಹಾರ ತಯಾರಿಕಾ ಘಟಕಗಳು, ಐಸ್‌ಕ್ರೀಮ್ ತಯಾರಿಕೆ, ಪೀಠೋಪಕರಣಗಳ ತಯಾರಿಕೆ, ರೇಷ್ಮೆಗೂಡಿನಿಂದ ರೇಷ್ಮೆ ತೆಗೆಯುವ ಹಾಗೂ ರೇಷ್ಮೆ ನೂಲು ತಯಾರಿಕಾ ಘಟಕಗಳ ಸ್ಥಾಪನೆಗೆ ತಾಲ್ಲೂಕಿನಲ್ಲಿ ಹೆಚ್ಚಿನ ಸಾಧ್ಯತೆಗಳಿವೆ.

* * * *